ದೇವರ ರಾಜ್ಯದ

# ಶುಭವಾರ್ತೆ

ಸಂಪುಟ 4 ಉಚಿತ ಹಂಚಿಕೆ ಸಂಚಿಕೆ 42

## ನಿಜಕ್ರೈಸ್ತನು ಯಾರು? - 2

### (Who is a real Christian ?)

— ಭಾ. ಚಂದುದಾಸ್

> "ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ." (ಗಲಾತ್ಯ 3 : 27)

ನಮ್ಮ ಹಿಂದಿನ ಸಂಚಿಕೆಯಲ್ಲಿ ಯೇಸುಕ್ರಿಸ್ತನ ಹೆಸರಿನ ಬಗ್ಗೆ ತಿಳಿಸಲಾಗಿದ್ದು, ಮಾನವರು ದೇವರ ಮುಂದೆ ನಿಲ್ಲಲು ಹಾಗೂ ಆತನಲ್ಲಿ ಅಂಗೀಕೃತವಾಗಲು ಆ ಹೆಸರನ್ನು ತಮ್ಮಲ್ಲಿ ಧರಿಸಿಕೊಳ್ಳಬೇಕಾಗಿರುತ್ತದೆ. ಸುವಾರ್ತೆಯನ್ನು ನಂಬಿದವರು ಈ ಹೆಸರನ್ನು ತಮ್ಮಲ್ಲಿ ಧರಿಸಿಕೊಳ್ಳುವ ಮಾರ್ಗವನ್ನು ದೀಕ್ಷಾಸ್ನಾನದ ವಿಧಿಯಲ್ಲಿ ಇರುತ್ತದೆ. ದೈವೀಕವಾಗಿ ನೇಮಿತವಾದ ಈ ವಿಧಾನದಲ್ಲಿ "ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ" ಎಂಬುದನ್ನು ತಿಳಿಸಲಾಗಿದೆ. ಪೌಲನು ಗಲಾತ್ಯದವರಿಗೆ ಬರೆದ ಪತ್ರಿಯಲ್ಲಿ ಹೀಗೆ ತಿಳಿಸಿದ್ದಾನೆ "ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" (3 : 27). ಕ್ರಿಸ್ತನನ್ನು ಧರಿಸಿಕೊಂಡನಂತರ ಅವರು ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರನ್ನು ಧರಿಸಿಕೊಂಡವರು. ಈ ರೀತಿಯಾಗಿ ಧರಿಸಿಕೊಂಡವರು ಸ್ವಾಭಾವಿಕ ಮಾನವನ ಚಿತ್ತಲತನದಲ್ಲಿ ಇನ್ನು ಮುಂದೆ ಇರುವುದಿಲ್ಲ; ಆದರೆ "ಸ್ವನೀತಿಯನ್ನಾಶ್ರಯಿಸದೆ ಕ್ರಿಸ್ತನ ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡುವ ನೀತಿಯನ್ನೇ ಹೊಂದಿದವರಾಗಿರುತ್ತಾರೆ" —(ಫಿಲಿಪ್ಪಿ 3 : 9)

ಆದ್ದರಿಂದ ರಕ್ಷಣೆಗೆ ದೇವರ ಬಲ ಸ್ವರೂಪವಾದ ಸುವಾರ್ತೆಯನ್ನು ಅರಿಯುವ ಮುನ್ನ ಮಾನವನು "ದೇವರ ರಾಜ್ಯದ ಹೆಸರಿನ ಮತ್ತು ಯೇಸುಕ್ರಿಸ್ತನ ಹೆಸರಿನ ವಿಷಯ"ವನ್ನು ಅರಿತುಕೊಳ್ಳಬೇಕು. ಒಂದಿಲ್ಲದೆ ಮತ್ತೊಂದು ಏನೂ ಪ್ರಯೋಜನಕಾರಿಯಲ್ಲ. "ದೇವರ ರಾಜ್ಯದ ವಿಷಯವನ್ನು" ಅರಿಯದೇ ಇರುವುದೆಂದರೆ ಸುವಾರ್ತೆಯನ್ನೇ ಅರಿಯದಿರುವುದಾಗಿದೆ. ಒಬ್ಬ ಮನುಷ್ಯನು ಯೇಸು ಕ್ರಿಸ್ತನನ್ನು ಶಿಲುಬೆಗೇರಿಸಿದ, ಆತನ ಪುನರುತ್ಥಾನದ ಹಾಗೂ ದಿವಾರೋಹಣದ (ಪರಲೋಕಕ್ಕೆ ಏರಿ ಹೋದ) ಚಾರಿತ್ರಿಕ ಸಂಗತಿಗಳ ಬಗ್ಗೆ ಬಹು ಚೆನ್ನಾಗಿ ತಿಳಿದಿರಬಹುದು. ಆದರೆ ಅವುಗಳನ್ನು ಅವುಗಳ ನೈಜ ತಾತ್ವಿಕ ಅರ್ಥಗಳನ್ನು ಹಾಗೂ ಅದರಿಂದುಂಟಾಗುವ ಮಹಿಮೆಯನ್ನು ಅರಿಯದಿದ್ದಲ್ಲಿ ದೇವರ ಉದ್ದೇಶದ ಬಗ್ಗೆ ಯಾವ ರೀತಿಯ ಜ್ಞಾನವೂ ಅವುಗಳಿಂದ ಆತನಿಗೆ ದೊರೆತಂತಾಗುವುದಿಲ್ಲ.

ಮಾನವನಿಗೆ ಇರುವಂತಹ ಜ್ಞಾನವು ಎಷ್ಟು ವಿಚಿತ್ರವಾದುದೆಂದರೆ ಅದು ಆತ್ಮದ ಅಮರತ್ವದ ತತ್ವದೊಂದಿಗೆ ಸೇರಿರುವಂತಹದ್ದಾಗಿದೆ; ಯಾಕೆಂದರೆ ಅಂತಹ ಜ್ಞಾನಕ್ಕೆ ಸತ್ಯವೇದದ (ದೇವರ ವಾಕ್ಯದ) ಅರ್ಥವಾಗಲೀ ಅಥವ ಆಧಾರವಾಗಲೀ ಇರುವುದಿಲ್ಲ. ಕ್ರಿಸ್ತನು "ಜೀವವನ್ನು" ಕೊಳ್ಳಲು ಸತ್ತನು ಎಂಬುದನ್ನು ನಾವು ಅರಿತಲ್ಲಿ ಇದು ಸ್ಪಷ್ಟವಾಗುತ್ತದೆ. ಆ ಬಲಿಗೆ ತನ್ನನ್ನು ಒಪ್ಪಿಸಿಕೊಟ್ಟಿದ್ದರಿಂದಲೇ "ಆತನು ನಿತ್ಯ ಜೀವವನ್ನು ಪ್ರಕಾಶಕ್ಕೆ ತಂದನು." "ಮೃತಪಟ್ಟಿದ್ದರಿಂದಲೇ (ಯೇಸುವು) ಮಾನ ಪ್ರಭಾವಗಳನ್ನು ಹೊಂದಿದನು. ಆತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು." (ಇಬ್ರಿಯ 2 : 9). ಅಮರತ್ವವು (ನಿತ್ಯ ಜೀವವು) ಮಾನವ ಪ್ರಕೃತಿಯ ಒಂದು ಅವಶ್ಯ ಗುಣಲಕ್ಷಣವೆಂದು ನಾವು ಭಾವಿಸಿದಲ್ಲಿ, ಕ್ರಿಸ್ತನ ಬಲಿಯನ್ನು ಸತ್ಯವೇದದ ಸ್ಥಾನದಿಂದ ತೆಗೆದು ಹಾಕಬೇಕಾಗುತ್ತದೆ. ಅದು ಜೀವವನ್ನು ಹೊಂದುವ ಒಂದು ಸಾಧನವಾದ ಅದರ ಲಕ್ಷಣವನ್ನೇ ನಾವು ನಾಶಪಡಿಸಿದಂತಾಗುತ್ತದೆ.

ಸುವಾರ್ತೆಯ ಸತ್ಯವು ಸರಿಯಾದ ಅರ್ಥದಲ್ಲಿ ನಮ್ಮಲ್ಲಿ ಪ್ರವೇಶಿಸಬೇಕಾದಲ್ಲಿ, ಮೊದಲಾಗಿ ಆತ್ಮವು ಅಮರವಾದದ್ದು ಎಂಬ ತಾತ್ವಿಕ ಸಿದ್ಧಾಂತವನ್ನು ನಮ್ಮ ಮನಸ್ಸಿನಿಂದ ತೊಡೆದುಹಾಕಬೇಕು. ಯಾಕೆಂದರೆ "ಒಬ್ಬ ಮನುಷ್ಯನಿಂದಲೇ ಮರಣವು ಬಂದಿತು" (ರೋಮಾಪುರ 5:12) ಎಂಬ ಅಸ್ತಿವಾರವನ್ನು ಅಲುಗಿಸಿ, ಸಂಪೂರ್ಣ ವಿಧಾನವನ್ನೇ ಅದು ಹಾಳುಮಾಡುತ್ತದೆ. ಅಲ್ಲದೆ ಸುವಾರ್ತೆಯು ನೀಡುವ ರಕ್ಷಣೆಯಿಂದ ನಮ್ಮ ಗಮನವನ್ನು ಬೇರೆಡೆಗೆ ಸೆಳೆದು ದೇವರು ಎಂದಿಗೂ ವಾಗ್ದಾನ ಮಾಡದ ಇರುವ ಪ್ರತಿಫಲದ ಕಡೆಗೆ ಒಯ್ಯಲು ಪ್ರಯತ್ನಿಸುತ್ತದೆ. ವಾಸ್ತವವಾಗಿ, ಅದರ ಪರಿಣಾಮವು ದೇವರ ವಾಕ್ಯ ಸೇರಿದವುಗಳನ್ನೆಲ್ಲಾ ತಿರುಗು-

ಮುರುಗು ಮಾಡುವದು, ಕಲುಷಿತಗೊಳಿಸುವುದು, ಶೂನ್ಯಗೊಳಿಸುವುದು ಹಾಗೂ ನಾಶಗೊಳಿಸುವುದು ಆಗಿರುತ್ತದೆ. ಶಾಂತಿ, ಕ್ರಮಬದ್ಧತೆ, ಸಾಮರಸ್ಯ ಹಾಗೂ ಸೌಂದರ್ಯವಿರುವ ಸ್ಥಾನದಲ್ಲಿ ಅದು ಗಲಿಬಿಲಿ ಹಾಗೂ ಅಸಂಬದ್ಧತೆಯನ್ನು ತಂದು ಹಾಕಿ ಪ್ರಕಟಣೆಯ ವಿಧಾನದೊಳಕ್ಕೆ ವಿನಾಶಕರ ಒದರುವಿಕೆಯನ್ನು ಬರಮಾಡುತ್ತದೆ. ತಾತ್ವಿಕವಾಗಿ ಹೇಳುವುದಾದರೆ ಅದೊಂದು ಅಶುದ್ಧಾತ್ಮ; ಮಾನವನು ಕ್ರಿಸ್ತನನ್ನು ಧರಿಸಿಕೊಳ್ಳುವ ಮುನ್ನ ದೈವೀಕ ಸತ್ಯಕ್ಕನುಸಾರವಾಗಿ ತನ್ನ ಮನಸ್ಸನ್ನು ನವೀಕರಿಸಿ ಕೊಳ್ಳುವ ಮುನ್ನ, ಅದನ್ನು ತನ್ನಿಂದ ದೂರಮಾಡಬೇಕು (ತೊಲಗಿಸಬೇಕು). ಇದಕ್ಕೆ ಹಿಂದೆ ಸತ್ಯವನ್ನು ತಟಸ್ಥವನ್ನಾಗಿ ಮಾಡುವ ತತ್ವಕ್ಕೆ ಆತನ ಮನಸ್ಸು ತುಂಬಿ ಕೊಂಡಿದ್ದು ತತ್ಪರಿಣಾಮವಾಗಿ ಸತ್ಯದ ಒಂದು ಕಿರಣವೂ ಪ್ರವೇಶಿಸಲು ತಡೆಯುತ್ತಿತ್ತು.

ಈಗ ನಾವು ಮುಟ್ಟಿದ ಘಟ್ಟವೇನೆಂದರೆ, ರಕ್ಷಣೆಗೆ ಬೇಕಾದ ಮೂಲಭೂತ ತತ್ತ್ವಗಳಲ್ಲಿ ಒಂದಾದ ಸುವಾರ್ತೆಯಲ್ಲಿರುವ ಕೆಲವು ನಿರ್ದಿಷ್ಟ ವಿಷಯಗಳನ್ನು ಅಂದರೆ "ದೇವರರಾಜ್ಯದ ವಿಷಯಗಳು ಮತ್ತು ಯೇಸು ಕ್ರಿಸ್ತನ ಹೆಸರಿನ ವಿಷಯ" ನಂಬುವುದೇ ಆಗಿದೆ. ಆ "ವಿಷಯಗಳು" ದೈವೀಕ ಸತ್ಯದ ಸಂಪೂರ್ಣ ವಿಷಯಗಳೇ ಆಗಿರುತ್ತವೆ. ಅವು ಸೃಷ್ಟಿಕರ್ತನಿಗೇ ಸೇರಿದ ಜ್ಞಾನವನ್ನು ಅಂಗೀಕರಿಸುತ್ತವೆ; ಆತನಿಗೆ ನಮ್ಮ ಸಂಬಂಧವು ಪಾಪದಿಂದ ಕೂಡಿದ ಹಾಗೂ ಬೆಲೆಯಿಲ್ಲದ ಜೀವಿಗಳಾಗಿರುತ್ತೇವೆ; ಯೇಸುಕ್ರಿಸ್ತನ ವಿಷಯವಾದ ಬೋಧನೆ; ನಮ್ಮ ಜನಾಂಗದೊಂದಿಗೆ ಯೆಹೋವನ ಕಾರ್ಯ; ಆತನ ವಾಗ್ದಾನಗಳು, ರಕ್ಷಣೆಗೆ ಒದಗಿಸಿರುವ ಮಾರ್ಗಗಳು; ಆತನಿಗೆ (ದೇವರಿಗೆ) ನಾವು ಮಾಡಬೇಕಾದ ಕರ್ತವ್ಯಗಳು— ಇವುಗಳನ್ನೊಳಗೊಂಡಿದೆ. ಒಬ್ಬ ಮನುಷ್ಯನಿಗೆ ನಿರ್ದಿಷ್ಟವಾದ ನಿರೀಕ್ಷೆ ಇಲ್ಲದಿದ್ದಲ್ಲಿ, ಆತನ ನಿರೀಕ್ಷೆಯು ಹೇಗೆ ತಾನೆ ಕಾರ್ಯತತ್ಪರವಾಗಿರಲು ಸಾಧ್ಯ? ನಂಬಿಕೆಗೆ ಒಂದು ನಿರ್ದಿಷ್ಟವಾದ ಉದ್ದೇಶವಿಲ್ಲದಿದ್ದಲ್ಲಿ ಅವನು ತನ್ನ ನಂಬಿಕೆಯನ್ನು ಹೇಗೆ ತಾನೇ ತೋರಿಸಲು ಸಾಧ್ಯ? ಸೈದ್ಧಾಂತಿಕ ಕ್ರೈಸ್ತತ್ವದ ಸೊಬಗು ಏನೆಂದರೆ ಅದು ಮನಸ್ಸಿನ ಉನ್ನತ ಆಕಾಂಕ್ಷೆಗಳಿಗೆ ಯಾವುದು ಬೇಕಾಗಿದೆಯೋ ಅದನ್ನು ಪಡೆಯಲು ಹಾಗೂ ತೃಪ್ತಿಪಡಿಸಲು ಬೇಕಾದುದನ್ನು ಒದಗಿಸುತ್ತದೆ.

ದೇವರು ಇದಕ್ಕಿಂತ ಉನ್ನತವಾದುದ್ದನ್ನು ಉದ್ದೇಶಿಸಿದ್ದಾನೆ. ಆತನು "ಅದೂ ಕೂಡ ಒಂದು ಜನಾಂಗವನ್ನು ರಾಜವಂಶದ ಯಾಜಕರನ್ನು, ಮೀಸಲಾದ ಜನವನ್ನು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ" ಸಿದ್ಧಪಡಿಸುತ್ತಿದ್ದಾನೆ (1 ಪೇತ್ರ 2 : 9). ಆತನು ಸಿದ್ಧಪಡಿಸುತ್ತಿರುವ ಈ ಜನರು "ನೂತನ ಸ್ವಭಾವವನ್ನು ಧರಿಸಿಕೊಂಡವರಾಗಿ, ಅದನ್ನು

ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇ ದಿನೇ ನೂತನವಾಗುತ್ತಾ ಪೂರ್ಣ ಜ್ಞಾನವನ್ನು ಹೊಂದುವವರಾಗುತ್ತಾರೆ (ಕೊಲೊಸ್ಸೆ 3 : 10). ಅವರು ಸಕಲ ಆತ್ಮೀಯ ಜ್ಞಾನವನ್ನು ಗ್ರಹಿಕೆಯನ್ನು ಹೊಂದಿ ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿದವರಾಗಿರುತ್ತಾರೆ" (ಕೊಲೊಸ್ಸೆ 1 : 9) ಈ ಕಾರ್ಯವನ್ನು ದೇವರು ಹೇಗೆ ಪರಿಣಾಮಕಾರಿಯಾಗಿ ನಡೆಸುತ್ತಾನೆಂದರೆ, ಸುವಾರ್ತೆಯನ್ನು ಸಾರುವುದರ ಮೂಲಕ ಪ್ರಾಪಂಚಿಕ ದೃಷ್ಟಿಯಲ್ಲಿ "ಜ್ಞಾನಿ" ಗಳೆನಿಸಿಕೊಂಡವರು ತಮ್ಮದೇ ಸೃಷ್ಟನೆಯಾದ ಅನೇಕ ಧಾರ್ಮಿಕ ತತ್ವಾಚರಣೆ ಹಾಗೂ ದೇವರ ವಾಕ್ಯಕ್ಕೆ ವಿರುದ್ಧವಾದ ಸಿದ್ಧಾಂತಗಳ ಬೋಧನೆಯನ್ನು ಹೊಂದಿದವರಾಗಿ ದೇವರು ತಾನೇ ನಿರ್ದಿಷ್ಟಪಡಿಸಿದ "ಸುವಾರ್ತೆಯ" ಈ ಮಾರ್ಗವನ್ನು ಅಲ್ಲಗಳೆಯುವವರಾಗಿರುತ್ತಾರೆ. "ಇಹಲೋಕ ಜ್ಞಾನವು ದೇವರ ಮುಂದೆ ಹುಚ್ಚುತನವಾಗಿದೆ." (ಕೊರಿಂಥ 3 : 19)

ಸತ್ಯವೇದದಲ್ಲಿರುವ ಹಾಗೆ ದೇವರ ಚಿತ್ತದ ಸರಿಯಾದ ಜ್ಞಾನ ಹಾಗೂ ಅದನ್ನು ನಂಬಿಕೆಯಿಂದ ಕಾರ್ಯಾಚರಣೆಗೆ ತರುವುದನ್ನು ಬಿಟ್ಟು, ಬೇರೆ ಯಾವುದೂ ಕೂಡ ಮಾನವನಿಗೆ ಅಂತ್ಯದಲ್ಲಿ ಶುಭವನ್ನು ತರುವುದಿಲ್ಲ. ಲೌಕಿಕ ಬುದ್ಧಿಜೀವಿಗಳು ಅಂತಹ ಮಾರ್ಗದಲ್ಲೊಳಗೊಂಡಿರುವ ಸಿದ್ಧಾಂತ ಹಾಗೂ ಮತಾಂಧತೆಯ ಬಗ್ಗೆ ಸಿಡಿದೇಳಬಹುದು, ಆದರೆ ಜ್ಞಾನೋದಯ (ತಿಳುವಳಿಕೆ) ಹೊಂದಿದವರು ಅಂತಹ ಮಾರ್ಗವನ್ನು ಒಪ್ಪುವವರಾಗಿರುತ್ತಾರೆ. "ನಮ್ಮ ನಂಬಿಕೆಯು ಮಾನುಷಜ್ಞಾನದಲ್ಲಿ ನಿಂತಿರದೆ ದೇವರ ವಾಕ್ಯದಲ್ಲಿ ನಿಂತಿರುತ್ತದೆ (1 ಕೊರಿಂಥ 2 : 5). ಯೇಸು ಕ್ರಿಸ್ತನು ಹೇಳಿದ್ದಾನೆ (ಪ್ರತಿಯೊಬ್ಬ ಮನುಷ್ಯನೂ ಕಿವಿಗೊಡಲಿ!) "ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ." (ಯೋಹಾನ 6 : 63). ಅಂದರೆ ಆತನು ಒಪ್ಪಿದ ಸುವಾರ್ತೆಯು "ರಕ್ಷಣೆಗೆ ದೇವರ ಬಲಸ್ವರೂಪವಾಗಿದೆ." ಅದ್ದರಿಂದ ಪೇತ್ರನು ಹೇಳಿದ ಹಾಗೆ, ಅವು "ನಿತ್ಯಜೀವದ ವಾಕ್ಯಗಳು (ಯೋಹಾನ 6 : 68). ಮತ್ತೆ ಯೇಸುವು ಹೀಗೆ ಹೇಳಿದ್ದಾನೆ : "ನನ್ನನ್ನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೇ ಇರುವವನಿಗೆ ತೀರ್ಪು ಮಾಡುವಂತಹುದು ಒಂದು ಇದೆ, ಅದು ಯಾವುದೆಂದರೆ, ನಾನು ಆಡಿದ ಮಾತು, ಅದೇ ಅವನಿಗೆ ಕಡೇ ದಿನಗಳಲ್ಲಿ ತೀರ್ಪು ಮಾಡುವುದು." (ಯೋಹಾನ 12 : 48)

ನಮ್ಮನ್ನು ಪರೀಕ್ಷಿಸುವ ಮಹಾದಿನವು ಬಂದಾಗ, ನಮ್ಮ ಸ್ಥಿತಿಯನ್ನು ಅಳೆಯುವ ಮಟ್ಟವು ಇಲ್ಲದೆ. ನಮ್ಮನ್ನು ಹೇಗಾದರೂ ತೀರ್ಪು ಮಾಡಲಿ, ನಾವು ಚಿಕ್ಕ ಹಿಂಡಿನೊಂದಿಗೆ ದೇವರ ವಾಕ್ಯದ ಸರಿಯಾದ ಬೋಧನೆಯ "ಇಕ್ಕಟ್ಟಾದ ಮಾರ್ಗ"ದಲ್ಲಿ ನಡೆಯುವುದೇ ಉತ್ತಮವಾಗಿರುತ್ತದೆ. ಅಸ್ಪಷ್ಟ ನಿರೀಕ್ಷೆ ಅಥವಾ ಜನ

ಸಾಮಾನ್ಯ ತಪ್ಪು ಬೋಧನೆಯು ಅಗಲವಾದ ಮಾರ್ಗದಲ್ಲಿ ನಡೆದು ಬಹು ಸಂಖ್ಯಾತ ಗುಂಪಿನೊಂದಿಗೆ ಇರುವುದಕ್ಕಿಂತಲೂ "ಇಕ್ಕಟ್ಟಾದ ಮಾರ್ಗದಲ್ಲಿ" ನಡೆದು ಚಿಕ್ಕ ಗುಂಪಿನೊಂದಿಗೆ ಇರುವುದೇ ಸರಿಯಾದ ಮಾರ್ಗವಾಗಿರುತ್ತದೆ. ಮೊದಲಿನದು (ಇಕ್ಕಟ್ಟಾದ ಮಾರ್ಗ) ಜೀವಕ್ಕೆ ಕರೆದೊಯ್ಯುತ್ತದೆ; ಕೊನೆಯದು ನಿಶ್ಚಯವಾದ ನಾಶನಕ್ಕೆ ಕೊಂಡೊಯ್ಯುತ್ತದೆ.

"ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲು ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು. ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು. ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ತನ್ನನ್ನೆ ಕೆಡಿಸಿಕೊಂಡರೆ ಅಥವ ನಷ್ಟಪಡಿಸಿಕೊಂಡರೆ ಅವನಿಗೆ ಪ್ರಯೋಜನವೇನು? ಯಾವನು ನನಗೂ ನನ್ನ ಮಾತುಗಳಿಗೂ ನಾಚಿಕೊಳ್ಳುತ್ತಾನೋ ಅವನಿಗೆ ಮನುಷ್ಯ ಕುಮಾರನು ತನಗೂ ತನ್ನ ತಂದೆಗೂ ಪರಿಶುದ್ಧ ದೂತರಿಗೂ ಇರುವ ಪ್ರಭಾವದೊಡನೆ ಬರುವಾಗ ನಾಚಿಕೊಳ್ಳುವನು" (ಲೂಕ 9 : 23 : 26).

ಯಾವನು ತನ್ನನ್ನು ತಾನೇ ಮೋಸಗೊಳಿಸದಿರಲಿ. ತಾನು ನಿಮ್ಮಲ್ಲಿ ಲೋಕ ಸಂಬಂಧವಾಗಿ ಜ್ಞಾನಿಯಾಗಿದ್ದೇನೆಂದು ಭಾವಿಸಿಕೊಳ್ಳುವವನು ಜ್ಞಾನಿಯಾಗುವಂತೆ ಹುಚ್ಚನಾಗಲಿ. ಯಾಕೆಂದರೆ ಇಹಲೋಕ ಜ್ಞಾನವು ದೇವರ ಮುಂದೆ ಹುಚ್ಚುತನವಾಗಿದೆ" (ಕೊರಿಂಥ 3 : 18-19)

"ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷಾ ಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು. ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು." (ಮಾರ್ಕ 16:15-16)

ಈ ಆಧುನಿಕ ದಿನಗಳಲ್ಲಿ "ನಿಜವಾದ ಮತ" (true religion) ದ ಎಲ್ಲವುಗಳು ಭಾವನಾ ರೂಪದ ಯಥಾರ್ಥತೆ, ಒಳ್ಳೆಯ ನಡತೆ, ಭಕ್ತಿಯ ಭಾವೋದ್ರೇಕ — ಇವೇ ಆಗಿರುತ್ತವೆ ತಾತ್ವಿಕ ವಿಷಯದಲ್ಲಿ ನಂಬಿಕೆಯು ಗಣನೆಗೆ ಬಾರದ ವಿಷಯವಾಗಿದೆ ಒಬ್ಬನು ಒಳ್ಳೆಯ ಉದ್ದೇಶದಲ್ಲಿ ಯಥಾರ್ಥನಾಗಿರಲಿ, ಮತ್ತು ನೈತಿಕ ಹಾಗೂ ಶ್ರೇಷ್ಠವಾದ ಜೀವಿತವನ್ನು ಜೀವಿಸಲಿ; ಮತೀಯ ಸತ್ಯತೆಯ ಬಗ್ಗೆ ಆತನು ಅಜ್ಞಾನಿಯಾದರೂ ಸಹ ಮುಂದೆ ಅರ್ಹರಿಗಾಗಿ ಇಟ್ಟಿರುವ ಬಾಧ್ಯತೆಯಲ್ಲಿ ಪಾಲು ಹೊಂದುವುದರಲ್ಲಿ ಸಂದೇಹವಿಲ್ಲ-ಇದು ಜನ ಸಾಮಾನ್ಯ ಭಾವನೆ.

ಈಗ ಇದು ಸತ್ಯ ಅಥವ ಸುಳ್ಳು-ಸುರಕ್ಷಿತ ಅಥವಾ ಮರುಳುಗೊಳಿಸುವಂತದ್ದಾಗಿರಬೇಕು. ಇದು ಸತ್ಯವಾಗಿದ್ದು ಸುರಕ್ಷಿತವೂ ಆಗಿದ್ದಲ್ಲಿ, ಆಗ ಸತ್ಯವೇದವು ಯಾವ ಆಧಾರವೂ ಇಲ್ಲದ್ದಾಗಿದೆ. ಯಾವ ಮನುಷ್ಯನೂ ಸತ್ಯವೇದದ ದೈವೀಕ ಆಧಾರದ ಮೇಲೆ ನಂಬಿಕೆಯನ್ನಿಟ್ಟಿರುವುದಾಗಿ ಹೇಳಿ, ಅದೇ ಕಾಲದಲ್ಲಿ ಇಂತಹ ಗಂಭೀರವಾದ ವಿಷಯದ ಬಗ್ಗೆ ಸಡಿಲವಾದ ಭಾವನೆ ಹೊಂದಿರುವುದೂ ಸಾಧ್ಯವಿಲ್ಲ. ಯಾಕೆಂದರೆ ಸತ್ಯವೇದವು ಒಂದೇ ರೀತಿಯಾಗಿ ಹಾಗೂ ಸ್ಪಷ್ಟವಾಗಿ ರಕ್ಷಣೆಯನ್ನು ಒಂದು ನಿಶ್ಚಯವಾದ ಏಕಪಕ್ಷೀಯ "ಇಕ್ಕಟ್ಟಾದ ಮಾರ್ಗ"ಕ್ಕೆ ಸೂಚಿಸುತ್ತದೆ. ಅದನ್ನು ಕಂಡು ಕೊಳ್ಳುವವರು ಬಹು ಸ್ವಲ್ಪ ಮಂದಿ, ಕಂಡು ಕೊಂಡವರಲ್ಲಿಯೂ ಅದರಲ್ಲಿ ಪ್ರವೇಶಿಸಿ ನಡೆಯುವವರು ಸ್ವಲ್ಪಜನ ಮಾತ್ರ. ಅದು ನಿರ್ದಿಷ್ಟ ಷರತ್ತುಗಳಿಗೊಳಪಟ್ಟು, ಸಾಧಾರಣ ಒಳ್ಳೆಯತನಕ್ಕಿಂತಲೂ ಹೆಚ್ಚಿನ ರೀತಿಯ ಅನುಸರಣೆಯನ್ನು ನಿರೀಕ್ಷಿಸುತ್ತದೆ. ಉದ್ದೇಶಪೂರ್ವಕವಾಗಿಯೋ ಅಥವ ಸಾಂದರ್ಭಿಕತೆಯಿಂದಲೊ ಅವಕ್ಕೆ ಒಳಪಡದವರು, (ಅನುಸರಿಸದೇ ಇರುವವರು), ಆ ಆಶೀರ್ವಾದದಿಂದ ಹೊರಪಡುವರು.

ಆದ್ದರಿಂದ ಮುಂದಿರುವ ಪ್ರಶ್ನೆ ಏನೆಂದರೆ – ಸತ್ಯವೇದ ಹಾಗೂ ಅವಿಶ್ವಾಸ ಇವುಗಳ ಮಧ್ಯೆ ನೇರವಾಗಿ ಇದೆ. ಈ ಪ್ರಶ್ನೆಗೆ ಸಂಬಂಧಿಸಿದಂತೆ ನಾವು ಒಂದು ಕಡೆ ಇಲ್ಲವೇ ಇನ್ನೊಂದು ಕಡೆ ಇದ್ದೇವೆ. ಇವೆರಡಕ್ಕೂ ಮಧ್ಯಂತರ ಸ್ಥಾನ ಇಲ್ಲವೇ ಇಲ್ಲ. ನಮಗೆ ಭವಿಷ್ಯತ್ತಿನ ನಿರೀಕ್ಷೆ ಏನಾದರೂ ಇದ್ದಲ್ಲಿ, ಅದು ಸತ್ಯವೇದದಲ್ಲಿ ಇರುವುದರಿಂದ ಮಾತ್ರ. ಯಾಕೆಂದರೆ ಬೇರೆ ಯಾವ ಮೂಲದಿಂದಲೂ ಅಂತಹ ನಿರೀಕ್ಷೆ ಹೊಂದಲು ಸಾಧ್ಯವಿಲ್ಲ ಹಾಗಿದ್ದಲ್ಲಿ, ಅಂತಹ ಪರಿಪೂರ್ಣತೆಯನ್ನು ನಾವು ಹೊಂದಲು ಆಶಿಸಿದಲ್ಲಿ ಅಥವಾ ಹೊಂದುತ್ತೇವೆಂಬ ಆಕಾಂಕ್ಷೆಯು ನಮ್ಮಲ್ಲಿ ಇರುವುದಾದಲ್ಲಿ, ಅದು ಅಂತಹ ನಿರೀಕ್ಷೆಯನ್ನು ಯಾವ ಷರತ್ತುಗಳಿಗೊಳಪಟ್ಟು ಮುಂತಿಳಿಸಲಾಗಿದೆಯೋ ಅಂತಹ ಷರತ್ತುಗಳನ್ನು ಅನುಸರಣೆ ಮಾಡಿದರೆ ಮಾತ್ರವೇ ಎಂಬುದು ನಿಶ್ಚಯವಾದದ್ದು. ಒಬ್ಬ ಮನುಷ್ಯನು ಸತ್ಯವೇದದಲ್ಲಿನ ರಕ್ಷಣೆಯನ್ನು ಹೊಂದಲು ನಿರೀಕ್ಷಿಸಿದಲ್ಲಿ, ಸತ್ಯವೇದದ ಷರತ್ತುಗಳಿಗೆ ಆತನು ಒಳಪಡಲೇಬೇಕು. ಅದು ಆತನ ಇಚ್ಛೆಗೆ ತಕ್ಕಂತೆ ಆಜ್ಞಾಪಿಸುವ ಷರತ್ತುಗಳಲ್ಲ. ಅದನ್ನು ಮಾನವಗುಣದ ಕೀಳುಶೀಲದಿಂದ ಕೊಳ್ಳಲು ಸಾಧ್ಯವಿಲ್ಲ. ಅದು ಮಾನವ ಜೀವಿತಕ್ಕಿಂತ ವಿಶೇಷವಾದುದು. ಆದ್ದರಿಂದ ಅದನ್ನು ಹೊಂದುವ ಮಾರ್ಗವೂ ಸಹ, ವಿಶೇಷವಾದದ್ದು. ಅದರ ವಿಶೇಷತೆಯಲ್ಲಿ ನಿಮಗೆ ಮೆಚ್ಚುಗೆ ಇಲ್ಲದಿದ್ದಲ್ಲಿ, ಅದನ್ನು ಹಾಗೆಯೇ ಬಿಟ್ಟುಬಿಡಲು ನೀವು ಸ್ವತಂತ್ರರು. ನಿಮಗೆ ಇಚ್ಛೆಯಿಲ್ಲದ ಅಥವ ರುಚಿಯಿಲ್ಲದ ವಿಷಯದಲ್ಲಿ ಪಾಲ್ಗೊಳ್ಳಲು ನಿಮ್ಮನ್ನು ಒತ್ತಾಯಿಸುವುದಿಲ್ಲ. ನಿಮ್ಮ ನಶ್ವರವಾದ ಮರ್ತ್ಯತ್ವದಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ನೀವು ಅನುಭವಿಸಿಕೊಳ್ಳಲು ಬಿಡುತ್ತೇವೆ. ಆದರೆ ಭವಿಷ್ಯತ್ತಿನಲ್ಲಿ ನಿಮಗೆ

ಯಾವ ನಿರೀಕ್ಷೆಯೂ ಇಲ್ಲವೆಂಬುದನ್ನು ಮಾತ್ರ ಜ್ಞಾಪಕದಲ್ಲಿಡಿ. ಷರತ್ತುಗಳಿಂದ ಕೂಡಿದ ದೇವರ ಒಳ್ಳೆಯತನದ ಕೊಡುಗೆಯನ್ನು ಉದ್ಧಟತನದಿಂದ ತಿರಸ್ಕರಿಸಿದ್ದರಿಂದ ನೀವು ಇದಕ್ಕೆ ಉತ್ತರ ನೀಡಲೇಬೇಕಾಗುತ್ತದೆ.

ಆದರೆ ನೀವು ನಿಮ್ಮ ಸದ್ಗುಣಕ್ಕೆ ಅಂಗೀಕಾರವನ್ನು ಮುಂದಿನ ಜೀವಿತದಲ್ಲಿ ಪ್ರತಿಫಲವನ್ನೂ ನೀಡಬೇಕೆಂಬ ನ್ಯಾಯದ ಬಗ್ಗೆ ಮಾತಾಡಲು ತೊಡಗಬಹುದು. ಇದನ್ನು ಯಾವುದರಿಂದ ಸಮರ್ಥಿಸುತ್ತೀರೆಂದು ನಿಮಗೆ ಗೊತ್ತಿದೆಯೇ ? ಯಾವ ನೀತಿಯ ಮೇಲೆ ಇದನ್ನು ಹೇಳುತ್ತೀರಿ? ನೀವು ಒಂದೇ ರೀತಿಯಾಗಿ ಅಪರಾಧದಿಂದ ವಿಮುಖರಾಗಿದ್ದೀರಿ ; ಕಳೆದುಕೊಂಡ ಆಸ್ತಿಯನ್ನು ಅದರ ಮಾಲೀಕರಿಗೆ ಹಿಂದಿರುಗಿಸಿದ್ದೀರಿ ; ಬಡವರಿಗೆ ಪ್ರೀತಿಯನ್ನು ತೋರಿದ್ದೀರಿ ; ನಿಮ್ಮ ಸಹಜರಿಗೆ ದಯೆಯನ್ನು ತೋರಿದ್ದೀರಿ ; ಬಹಳ ಒಳ್ಳೇದು. ಇವುಗಳಿಂದಾಗಿ ನೀವು ಮುಂದಿನ ಜೀವಿತಕ್ಕೆ ಅರ್ಹತೆಯನ್ನು ಸ್ಥಾಪಿಸಿದ್ದೀರಾ ? ಇಲ್ಲ, ನನ್ನ ಸ್ನೇಹಿತರೇ, ನೀವು ತತ್ವಜ್ಞಾನಿಯಾಗಿರಬಹುದು. ಆದರೆ ಅಂತಹ ಒಳ್ಳೆಯ ಗುಣಗಳು ಈ ಜೀವಿತಕ್ಕೆ ಮಾತ್ರ ಸೀಮಿತವಾದುದೆಂದು ನಿಮಗೆ ತಿಳಿಯದೋ ? ನಿಮ್ಮನ್ನು ಕ್ರೂರಿಗಳಿಂದ ಪ್ರತ್ಯೇಕಿಸುವ ಶ್ರೇಷ್ಠ ಗುಣಗಳನ್ನು ಕಾರ್ಯಾಚರಣೆಗೆ ತಂದು, ನಿಮ್ಮ ಪ್ರಕೃತಿಗೆ ಸಾಧ್ಯವಾಗಬಲ್ಲ ಆನಂದಕ್ಕೆ ಮುಟ್ಟಿರುತ್ತೀರಿ ಆದರೆ ಇದರಿಂದಾಗಿ ನೀವು ಮುಂದಿನ ಜೀವಿತಕ್ಕೆ ಅರ್ಹತೆಯನ್ನು ಪಡೆದಂತಾಗಲಿಲ್ಲ, ಯಾಕೆಂದರೆ ಅದು ವಿಶೇಷವಾದುದು. ಅದು ಸ್ವಾಭಾವಿಕವಾಗಿ ಬೆಳೆಯುವ ಕಾರ್ಯಗಳಿಂದಾಗುವಂತಹದಲ್ಲ. ದೇವರ ಸೃಷ್ಟಿ ಕಾರಕ ಶಕ್ತಿಯಿಂದ (ಷರತ್ತಿಗೊಳಪಟ್ಟು) ಸೇರಿಸಲ್ಪಡುವುದಾಗಿದೆ. ನಿಮ್ಮ ಸ್ವಾಭಾವಿಕ ಒಳ್ಳೆಯತನಕ್ಕೆ ಆ ಜೀವಿತವನ್ನು ಪ್ರತಿಫಲವಾಗಿ ಪಡೆಯಬಹುದೆಂಬ ನಿಮ್ಮ ನಿರೀಕ್ಷೆಯು ವ್ಯರ್ಥವಾದುದು. ಆ ನಿತ್ಯಜೀವವು ನಿಮ್ಮ ಪ್ರಯೋಜನಕ್ಕಾಗಿ ಕ್ರಿಸ್ತಯೇಸುವಿನಲ್ಲಿ ಇಡಲ್ಪಟ್ಟಿದೆ ನೀವು ಆತನನ್ನು ಅಂಗೀಕರಿಸಿದಲ್ಲಿ, ನಿನಗೆ ನಿತ್ಯಜೀವ ಉಂಟು. (1 ಯೋಹಾನ 5, 10, 12) ; ಇಲ್ಲದಿದ್ದಲ್ಲಿ ನಿನ್ನ "ಒಳ್ಳೆಯತನ" ನಿನಗೇನೂ ಲಾಭ ತರದು. ಆದರೆ ದೇವರ ಸೃಷ್ಟಿಯೊಳಗಿಂದ ನಿನ್ನೊಂದಿಗೇ ಅದು ಕಣ್ಮರೆಯಾಗುವುದು.

"ನಂಬಿಕೆ" ಅಥವಾ "ವಿಶ್ವಾಸಕ್ಕೆ" ಇಷ್ಟೊಂದು ತಾತ್ವಿಕ ಪ್ರತಿಕೂಲವಿದೆ ಎನ್ನುವುದಾದರೆ ನಿಜಕ್ಕೂ ಆಶ್ಚರ್ಯವೇ. "ನಂಬಿಕೆ"ಯು ಮತಸೂತ್ರ ಕರ್ತೃಗಳು ಕಂಡುಹಿಡಿದದ್ದಲ್ಲ. ಅದು ಪರಿಮಿತ ಮನಸ್ಸಿನ ಸ್ವಾಭಾವಿಕವಾದ, ಒಂದೇ ಸಮನಾದ ಹಾಗೂ ಅಗತ್ಯವಾದ ಕಾರ್ಯಾಚರಣೆಯಾಗಿದೆ. ಅದಿಲ್ಲದೆ ನಾವು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ನಾವು ಮತೀಯ ಸೂತ್ರಗಳಲ್ಲಿ ನಂಬಿಕೆ ಇಡದಿದ್ದಲ್ಲಿ, ಬೇರಾವುದರಲ್ಲಿ ಯಾವರೂ ನಂಬಿಕೆ ಇಟ್ಟಿರುತ್ತೇವೆ. ಯಾವುದರಲ್ಲಿಯಾದರೂ ನಂಬಿಕೆ ಇಡದೆ

ಇರಲು ನಮಗೆ ಸಾಧ್ಯವಿಲ್ಲ. ಅದು ಎಲ್ಲಾ ಬುದ್ಧಿಶಕ್ತಿಯ ಕಾರ್ಯಾಚರಣೆಯ ಮುಖ್ಯ ಬಗ್ಗೆಯಾಗಿದೆ — ಸಂತೋಷ ಹಾಗೂ ದುಃಖದ ಪ್ರತಿಯೊಂದು ಅನುಭವದ ಮೂಲವಾಗಿದೆ. ಒಬ್ಬನು ದಿನವಿಡೀ ಕಾರ್ಖಾನೆಯಲ್ಲಿ ದುಡಿಯುವಂತೆ ಮಾಡುವುದು ಯಾವುದು ? ಯಾಕಂದರೆ ಅವನು ತನ್ನ ಸಂಬಳವನ್ನು ಪಡೆಯುತ್ತೇನೆಂದು ನಂಬುತ್ತಾನೆ ; ಇಲ್ಲದಿದ್ದಲ್ಲಿ ಅವನು ಹಾಗೆ ಮಾಡುತ್ತಿದ್ದನೇ ? ಮರಣ ಶಿಕ್ಷೆಗೆ ಒಳಗಾದ ಅಪರಾಧಿಯು ಏಕೆ ಮನಗುಂದಿದವನಾಗಿಯೂ ನಿರುತ್ಸಾಹಿತ ನಾಗಿಯೂ ಇರುತ್ತಾನೆ ? ಯಾಕಂದರೆ ತನ್ನ ಮರಣವು ಬಹು ಬೇಗನೇ ಸಂಭವಿಸುತ್ತದೆಂದು ಅವನು ನಂಬಿರುತ್ತಾನೆ. ಆದರೆ, ಸದರಿ ಮರಣದಂಡನೆಯ ಆಜ್ಞೆಗೆ ತಡೆಯಾಜ್ಞೆ ಬಂದಿದೆಯೆಂದು ಆತನಿಗೆ ತಿಳಿಸಿದಾಗ, ಅವನು ಎಷ್ಟು ಸಂತೋಷದಿಂದ ಕುಣಿದಾಡುತ್ತಾನೆ ಅಲ್ಲವೇ ? ಏಕೆ ? ತನಗೆ ಮುಂದೆ ಕಾದಿದ್ದ ವಿಪತ್ತಿನಿಂದ ತಾನು ಪಾರಾಗಬಹುದೆಂದು ಅವನು ನಂಬುತ್ತಾನೆ ! ನಮ್ಮ ಸಂಪೂರ್ಣ ವಾಣಿಜ್ಯ [ವ್ಯಾಪಾರ] ವ್ಯವಸ್ಥೆಯು "ನಂಬಿಕೆ [ವಿಶ್ವಾಸ]" ಯ ಮೇಲೆ ಆಧಾರ ಗೊಂಡಿದೆ. ಸಮಾಜವು ಅಪನಂಬಿಕೆಯುಳ್ಳದ್ದಾದ ಕೂಡಲೇ ನಮಗೆ ಗಾಭರಿ ಉಂಟಾಗುತ್ತದೆ ಮತ್ತು ತೊಂದರೆಗಳು ಒಂದರ ಹಿಂದೆ ಬರಲು ಪ್ರಾರಂಭಿಸುತ್ತವೆ. ಮತೀಯ ವಿಷಯುಗಳಲ್ಲಿಯೂ ಹಾಗೆಯೇ ; ನಂಬಿಕೆಯೇ ಪ್ರಥಮ ನೀತಿಯಾಗಿದೆ ; ಪ್ರಯೋಗಾತ್ಮಕ ವಿಶ್ವಾಸದ ತಳಹದಿ, ಆತ್ಮೀಯ ಪರವಶತೆ ಹಾಗೂ ಸಮಂಜಸ ಕಾರ್ಯಾಚರಣೆಗೆ ಕಾರಣೀಭೂತ.

"ನಂಬಿಕೆ" ಎಂದರೇನು ? ಅದು ವಿಷಯುಗಳ ನಿರ್ದಿಷ್ಟ ಅಂಶಗಳಿಗೆ ಮನಸ್ಸಿನ ಒಪ್ಪಿಗೆಯಾಗಿರುತ್ತದೆ. ನಂಬಿಕೆಯು ಬರುವ ಮುನ್ನ, ಮನಸ್ಸಿಗೆ (ಬುದ್ಧಿಗೆ) ವಿಷಯುವು ತಿಳಿಸಿರಬೇಕು. ಅಂದರೆ ಮೊದಲು ತಿಳುವಳಿಕೆ ಅಥವಾ ನಂಬಬೇಕಾದ ವಿಷಯುದ ಬಗ್ಗೆ ಅರಿವು ಇರಬೇಕು. ಇಲ್ಲಿ ತಿಳುವಳಿಕೆ ಅಥವಾ ಜ್ಞಾನವು ನಂಬಿಕೆಯ ತಳಹದಿಯಾಗಿದೆ. ಈ ಸೂತ್ರವು (ವ್ಯಾವಹಾರಿಕ) ವಿಷಯುಗಳಲ್ಲಿ ವಾಸ್ತವವಾಗಿ ಒಪ್ಪಿಕೊಂಡಂತದ್ದಾಗಿದೆ. ಹಾಗಿದಲ್ಲಿ ಮತೀಯ ವಿಷಯುಗಳಲ್ಲಿ ಅದರ ಪ್ರಾಮುಖ್ಯತೆ ಯನ್ನು ಅಲ್ಲಗಳೆಯುವುದಾದರೆ, ಎಷ್ಟು ಅಸಮಂಜಸವಾಗಿರುತ್ತದೆ ! "ಶಾಶ್ವತ ಅಂಶಗಳ ಬಗ್ಗೆ ಉದಾಸೀನವಾಗಿ ಮಾತಾಡುವುದು ಎಷ್ಟು ಮೂರ್ಖತನ.

ಸುವಾರ್ತೆಯಲ್ಲಿ ನಂಬಿಕೆಯನ್ನಿಡುವುದೇ ರಕ್ಷಣೆಯ ಪ್ರಥಮ ಷರತ್ತಾಗಿದೆ. ಒಬ್ಬನು ದೇವರ ಮಹಿಮಾತಿಶಯದ ವಾಗ್ದಾನಗಳ ಬಗ್ಗೆ ನಂಬಿಕೆ ಇಟ್ಟಿರಬಹುದು. ಆದರೂ ಅವುಗಳಲ್ಲಿ ಇನ್ನೂ ಪಾಲುಗಾರನಾಗಿರುವುದಿಲ್ಲ. ಅವನು ದೀಕ್ಷಾಸ್ನಾನ ಹೊಂದಲೇಬೇಕು. ಯಾಕೆಂದರೆ "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು." ಮಾರ್ಕ 16 : 16. ಇದೊಂದು ಅಪೋಸ್ತಲರ ಪದ್ಧತಿಯು

ಲಕ್ಷಣವಾಗಿದ್ದು, ಇಂದು ಕ್ರೈಸ್ತರೆಂಬ ಹೆಸರನ್ನು ಹೊಂದಿರುವ ಮಹಾ ಸಮೂಹವು ಅದನ್ನು ಸಾಮಾನ್ಯವಾಗಿ ಕಡೆಗಣಿಸದೆ ಇಂತಹ ಸರಳವಾದ ಕ್ರೈಸ್ತ ಸೂತ್ರಗಳಲ್ಲೊಂದಾದ ದೀಕ್ಷಾಸ್ನಾನವನ್ನು ವ್ಯವಸ್ಥಿತವಾಗಿ ಉಲ್ಲಂಘಿಸುತ್ತಿರುವ ಈ ಬೃಹತ್ ಕ್ರೈಸ್ತ ಸಮಾಜವು ಎಷ್ಟೊಂದು ಅಸಾಮಾನ್ಯವಾದುದು. ಹೊಸ ಒಡಂಬಡಿಕೆ ಭಾಗದಲ್ಲಿ ತಿಳಿಸಿರುವ ಈ ಕರ್ತವ್ಯದ ಬಗ್ಗೆ ಲವಲೇಶವಾದರೂ ಅನಿಶ್ಚಯಾರ್ಥ ಕಂಡುಬರುವುದಿಲ್ಲ.

ಪೆಂತಕೋಸ್ತ್ ದಿನದಂದು ಹೃದಯದಲ್ಲಿ ಅಲುಗುನೆಟ್ಟಂತಾದವರು ಕೇಳಿದರು, "ಸಹೋದರರೇ, ಈಗ ನಾವೇನು ಮಾಡಬೇಕು ?" ಅದಕ್ಕೆ ಉತ್ತರ— "ಮಾನಸಾಂತರಪಟ್ಟು, ನಿಮ್ಮಲ್ಲಿ ಪ್ರತಿಯೊಬ್ಬನೂ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" ಎನ್ನುವುದೇ. "ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು" (ಅಪೋಸ್ತಲರ ಕೃತ್ಯ 2 : 37, 38, 41). ಅದೇ ದಿನ ಸುಮಾರು 3000 ಜನರು ಸೇರಿಸಲ್ಪಟ್ಟರು. ಇಲ್ಲಿದೆ ವಿಧೇಯತೆ ಹಾಗೂ ಉದಾಹರಣೆ. ಅಪೋಸ್ತಲರ ಕೃತ್ಯ 8ನೇ ಅಧ್ಯಾಯ 12ನೇ ವಚನದಲ್ಲಿ ಹೀಗೆ ಓದುತ್ತೇವೆ: "ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭ ವರ್ತಮಾನವನ್ನು ಸಾರಲು, ಸಮಾರ್ಯದವರು ನಂಬಿ, ಗಂಡಸರೂ ಹೆಂಗಸರೂ ದೀಕ್ಷಾಸ್ನಾನ ಮಾಡಿಸಿಕೊಂಡರು." ಮತ್ತೆ ಕೊರ್ನೇಲ್ಯನೂ ಅವನ ಜತೆಯವರ ಬಗ್ಗೆ ನಾವು ಅಪೋಸ್ತಲರ ಕೃತ್ಯ 10 : 47, 48 ರಲ್ಲಿ ಹೀಗೆ ಓದುತ್ತೇವೆ. ಅವರ ಸಂದರ್ಶನ ನಡೆಸಿದ ಅಂತ್ಯದಲ್ಲಿ ಪೇತ್ರನು ಹೇಳಿದನು, "ನಮ್ಮ ಹಾಗೆಯೇ ಪವಿತ್ರಾತ್ಮ ವರವನ್ನು ಹೊಂದಿದ ಇವರಿಗೆ ನೀರಿನ ದೀಕ್ಷಾಸ್ನಾನವಾಗದಂತೆ ಯಾರಾದರೂ ಅಭ್ಯಂತರ ಮಾಡಾರೇ ಎಂದು ಹೇಳಿ ಅವರಿಗೆ —ನೀವು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಅಪ್ಪಣೆ ಕೊಟ್ಟನು." ಮತ್ತೆ ಪೌಲನ ಬಗೆಯೂ ಸಹ ಆತನು ಪರಿವರ್ತನೆ ಹೊಂದಿದ, ನಂತರ "ಈಗ ನೀನೇಕೆ ತಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" ಎಂದು ಅನನೀಯನು ಅವನಿಗೆ ಹೇಳಿದನು (ಅಪೋಸ್ತಲರ ಕೃತ್ಯ 22 : 16). "ಅವನು ಎದ್ದು ದೀಕ್ಷಾಸ್ನಾನ ಮಾಡಿಸಿಕೊಂಡನು" (ಅಪೋಸ್ತಲರ ಕೃತ್ಯ 9 : 18). ನಂತರ ಫಿಲಿಪ್ಪಿಯ ಸೆರೆಮನೆ ಯಜಮಾನನ ಪ್ರಕರಣವನ್ನು ನಾವು ಅಪೋಸ್ತಲರ ಕೃತ್ಯ 16ನೇ ಅಧ್ಯಾಯದಲ್ಲಿ ಓದುತ್ತೇವೆ. ಅದರಲ್ಲಿಯೂ ಸಹ ಇದೇ ಪಾಠವನ್ನು ಒತ್ತಾಯಿಸಿ ಜಾರಿಗೆ ತರಲಾಗಿದೆ. 33ನೇ ವಚನದಲ್ಲಿ, "ಕೂಡಲೇ ತಾನು ತನ್ನವರೆಲ್ಲರ ಸಹಿತವಾಗಿ ದೀಕ್ಷಾಸ್ನಾನ ಮಾಡಿಸಿಕೊಂಡನು." ನಮ್ಮ ಕರ್ತನಾದ

ಯೇಸುವು ತಾನೇ ಈ ವಿಧೇಯತ್ವದ ಕಾರ್ಯಕ್ಕೆ ಒಳಗಾದನೆಂಬುದನ್ನು ನಾವು ಜ್ಞಾಪಿಸಿಕೊಳ್ಳಬೇಕು.

ಆ ಕಾಲದಲ್ಲಿ ಯೇಸು ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೊರ್ದನ ಹೊಳೆಗೆ ಬಂದನು. ಆಗ ಯೋಹಾನನು—ನಾನು ನಿನ್ನಿಂದ ಸ್ನಾನ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು ಎಂಬು ಹೇಳಿ ಆತನನ್ನು ತಡೆಯುತ್ತಾ ಇದ್ದನು. ಆದರೆ ಯೇಸು ಅವನಿಗೆ ಸದ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡನು" (ಮತ್ತಾಯ 3 : 13–15).

ಪ್ರಥಮ ಶತಮಾನದ ಕಾಲದಲ್ಲಿ ಸತ್ಯವನ್ನು ನಂಬಿದವರೆಲ್ಲರೂ ನೀರಿನ ದೀಕ್ಷಾ ಸ್ನಾನವೆಂಬ ಸಂಸ್ಕಾರವನ್ನು ಹೊಂದಿದರೆಂದು ಹೊಸ ಒಡಂಬಡಿಕೆಯಲ್ಲಿನ (ಅನೇಕ ಹಾಗೂ ನಿರ್ಣಾಯಕ) ಉದಾಹರಣೆಗಳು ತೋರಿಸುತ್ತವೆ. ಕ್ರೈಸ್ತರೆಂದು ಹೇಳಿ ಕೊಳ್ಳುವ ಬಹುತೇಕ ಜನರು ಸಾಮಾನ್ಯವಾಗಿ ತಮ್ಮ ಬಗ್ಗೆ ದೀಕ್ಷಾಸ್ನಾನದ ಅಗತ್ಯತೆಯ ವಿರುದ್ಧ ವಾದ ಮಾಡುವವರಾಗಿದ್ದಾರೆ. ಆದರೆ ದೀಕ್ಷಾಸ್ನಾನದ ಸಂಸ್ಕಾರದ ಬಗ್ಗೆ ಅಪೊಸ್ತಲರು ತೀವ್ರವಾದ ಪರಿಣಾಮದ ಅಭಿಪ್ರಾಯವನ್ನು ಹೊಂದಿದ್ದರು. ಪೌಲನು ಈ ಬಗ್ಗೆ ಅರ್ಥಗರ್ಭಿತವಾಗಿ ಹೇಳಿದ್ದಾನೆ; "ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿ ಕೊಂಡಿರಿ" (ಗಲಾತ್ಯ 3 : 27). ಮತ್ತು, "ನೀವು ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ. ಇದು ಪಾಪಾಧೀನ ಸ್ವಭಾವವನ್ನು ವಿಸರ್ಜಿಸುವುದೇ, ಇದೇ ಕ್ರಿಸ್ತೀಯ ಸುನ್ನತಿ. ನೀವು ದೀಕ್ಷಾಸ್ನಾನ ದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ" (ಕೊಲೊಸ್ಸೆ 2 : 11, 12).

ಮತ್ತು ಪೌಲನು ರೋಮಾಪುರ 6: 3–6 ರಲ್ಲಿ ಹೀಗೆ ಹೇಳುತ್ತಾನೆ : "ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವೂ ಕೂಡ ಜೀವದಿಂದೆದ್ದು ಹೊಸಬರಾಗಿ ನಡೆಕೊಳ್ಳಬೇಕು. ಹೇಗೆಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯ

ವಾಗುವೆವು. ಪಾಪಾಧೀನ ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವ ಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ."

ಕಡೇದಾಗಿ ಪೇತ್ರನು ತನ್ನ 1ನೇ ಪತ್ರಿಕೆಯ 3ನೇ ಅಧ್ಯಾಯದ 20-21ನೇ ವಚನಗಳಲ್ಲಿ ಹೀಗೆ ಹೇಳಿದ್ದಾನೆ :-

"ಆ ನಾವೆಯೊಳಗೆ ಕೆಲವರು ಅಂದರೆ ಎಂಟೇ ಜನರು ಸೇರಿ ನೀರಿನ ಮೂಲಕ ರಕ್ಷಣೆ ಹೊಂದಿದರು. ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ ಅದು ಮೈ-ಕೊಳೆಯನ್ನು ಹೋಗಲಾಡಿಸುವಂಥದಲ್ಲ. ಒಳ್ಳೇ ಮನಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ."*

ಹಿಂದಿನ ಪುಟಗಳಲ್ಲಿ ತಿಳಿಸಿದಂತೆ ದೀಕ್ಷಾ-ಸ್ನಾನದ ಸಂಸ್ಕಾರಕ್ಕೆ ಒಳಗಾಗುವ ಮುನ್ನ ಒಬ್ಬನು "ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ" ಸರಿಯಾದ ತಿಳುವಳಿಕೆ ಹೊಂದಿರಬೇಕು. ಹಾಗಾದರೆ ಈ ಎರಡು ವಿಷಯಗಳೇನು? ಸಂಕ್ಷಿಪ್ತವಾಗಿ ಹೇಳುವುದಾದರೆ "ದೇವರ ರಾಜ್ಯದ ವಿಷಯವು" ಯೇಸುಕ್ರಿಸ್ತನು ಈ ಲೋಕಕ್ಕೆ ಹಿಂದಿರುಗಿದಾಗ, ಸ್ಥಾಪಿಸಲ್ಪಡುವ ದೇವರ ರಾಜ್ಯಕ್ಕೆ ಸಂಬಂಧಿಸಿದುದಾಗಿದೆ. "ಯೇಸುಕ್ರಿಸ್ತನ ಹೆಸರಿನ" ವಿಷಯವು ನಿತ್ಯ ಜೀವಕ್ಕೆ ಪಾಪಗಳ ಕ್ಷಮಾಪಣೆಯನ್ನು ಹೊಂದಬಹುದಾದ ಆತನ ಬಲಿಯ ಉದ್ದಿಷ್ಟ ಕಾರ್ಯಕ್ಕೆ ಸಂಬಂಧಿಸಿದುದಾಗಿದೆ. ಅಪೋಸ್ತಲರ ಕಾಲದಲ್ಲಿ ಅವರ ಬೋಧನೆಯ ಈ ಎರಡೂ ಸಂಬಂಧಗಳನ್ನು ನಂಬಿದ ನಂತರವೇ ಅವರನ್ನು ಶಿಷ್ಯರಾಗಿ ಅಂಗೀಕರಿಸಿ, ದೀಕ್ಷಾಸ್ನಾನವನ್ನು ಮಾಡಲಾಗುತ್ತಿತ್ತು. ಇವೆರಡರಲ್ಲಿ ಒಂದಿಲ್ಲದೆ ಮತ್ತೊಂದಿಲ್ಲ. ಮೊದಲನೇದು ನಿರೀಕ್ಷೆಯನ್ನು ನಿಮ್ಮ ಮುಂದಿಡುತ್ತದೆ. ಎರಡನೇದು ಆ ನಿರೀಕ್ಷೆಯನ್ನು ಹೇಗೆ ಮುಟ್ಟಬಹುದೆಂಬುದನ್ನು ತಿಳಿಸುತ್ತದೆ.

## 1. ದೇವರ ರಾಜ್ಯಕ್ಕೆ ಸಂಬಂಧಿಸಿದ ವಿಷಯಗಳು

ಯೇಸುಕ್ರಿಸ್ತನು ಭೂಲೋಕದ ಮೇಲೆ ದೇವರ ರಾಜ್ಯವನ್ನು ಸ್ಥಾಪಿಸುತ್ತಾನೆ. (ದಾನಿಯೇಲ 2 : 44) ಮತ್ತು ಅದು ಎಂದೆಂದಿಗೂ ಇರುತ್ತದೆ (ಲೂಕ 1 : 32-33) ಎಂದು ಸತ್ಯವೇದವು ಸ್ಪಷ್ಟವಾಗಿ ಪ್ರಕಟಿಸುತ್ತದೆ. ಅದರ ಆಡಳಿತವು ಕರ್ತನಾದ ಯೇಸುಕ್ರಿಸ್ತನ ಹಸ್ತದಲ್ಲಿಯೇ ಇರುತ್ತದೆ (ಪ್ರಕಟಣೆ 11 : 15) ಮತ್ತು ಪುನರುತ್ಥಾನ ಹೊಂದಿದ ಆತನ ಭಕ್ತರಿಗೆ ನಿತ್ಯ ಜೀವ ಕೊಡ

---

* "ಜೀವಿತದ ಮಾರ್ಗ" ಎಂಬ ಕಿರು ಪುಸ್ತಕಕ್ಕೆ ಬರೆಯಿರಿ. ಉಚಿತವಾಗಿ ಕಳುಹಿಸಲಾಗುವುದು.

ಲಾಗುತ್ತದೆ (ಪ್ರಕಟನೆ 5: 9-10, 20: 4). ಆ ರಾಜ್ಯವು ನಿರಂಕುಶ ಮತ್ತು ದೈವೀಕ ಆಡಳಿತಕ್ಕೊಳಪಟ್ಟು ದೇವರ ಮಹಿಮೆಗೆ ಹಾಗೂ ಜನರ ಕ್ಷೇಮಕ್ಕಾಗಿ ಆಳ್ವಿಕೆ ನಡೆಸಲ್ಪಡುತ್ತದೆ (ಲೂಕ 2: 14, ಪ್ರಕಟನೆ 2: 27). ಮಹಿಮೆಗೊಂಡ ಯೆರೂಸಲೇಮು ಆ ರಾಜ್ಯದ ರಾಜಧಾನಿಯಾಗಿರುತ್ತದೆ (ಯೆಶಾಯ 24: 23). ಮಾನವ ವರ್ಗದ ಮಾರ್ಗದರ್ಶನ ಹಾಗೂ ವಿಧೇಯತೆಗೆ ಆ ಕೇಂದ್ರದಿಂದ ದೈವೀಕ ಆಜ್ಞೆಗಳೂ, ಕಟ್ಟಳೆಗಳೂ ಹೊರಡಿಸಲ್ಪಡುತ್ತವೆ (ಯೆಶಾಯ 2: 2-4, ಜೆಕರ್ಯ 14: 16). ಎಲ್ಲಾ ಜನಾಂಗಗಳೂ ಆ ರಾಜನಿಗೆ (ಯೇಸು ಕ್ರಿಸ್ತನಿಗೆ) ಶರಣಾಗತರಾಗುವರು (ಕೀರ್ತನೆ 72: 11, 2: 8 12, ಯೆಶಾಯ 60: 12). ಪುನಶ್ಚೇತನಗೊಂಡು, ಶಿಸ್ತಿಗೊಳಪಟ್ಟು ಹಾಗೂ ಪರಿಶುದ್ಧ ಮಾಡಲ್ಪಟ್ಟ ಇಸ್ರಾಯೇಲ್ ಜನಾಂಗದವರೂ ಸೇರಿರುತ್ತಾರೆ (ಜೆಕರ್ಯ 12: 10, ಆಮೋಸ 9: 11, ರೋಮಾಪುರ 11: 25 18). ಭೂಮಿಯ ಮೇಲೆ ದೇವರ ನೀತಿಯುತ ಆಳ್ವಿಕೆಯು ಸ್ಥಾಪನೆಯಾಗುವುದರಿಂದ ಆಗುವ ಪರಿಣಾಮ ಒಬ್ಬನೇ ರಾಜ, ಒಂದೇ ಸರ್ಕಾರ, ಒಂದೇ ಚಕ್ರಾಧಿಪತ್ಯ ಮತ್ತು ಒಂದೇ ಮತ (Religion) ಇರುತ್ತದೆ.

ಇಂದಿನ ಎಲ್ಲಾ ವೈರತ್ವಗಳ ಬದಲಾಗಿ ಕ್ರಿಸ್ತನು ತನ್ನ ಶಿಷ್ಯರಿಗೆ ಆ ರಾಜ್ಯವನ್ನು ಸ್ಥಾಪಿಸಲು ಈ ರೀತಿಯಾಗಿ ಪ್ರಾರ್ಥನೆ ಮಾಡಲು ಬೋಧಿಸಿದನು, "ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" (ಮತ್ತಾಯ 6: 10). ಆ ರಾಜ್ಯದ ವಿಸ್ತೀರ್ಣ, ಸ್ಥಾನ ಹಾಗೂ ವ್ಯಾಪ್ತಿಯ ಬಗ್ಗೆ ಪ್ರವಾದಿಯಾದ ದಾನಿಯೇಲನು ಸಂಕ್ಷಿಪ್ತವಾಗಿ ತಿಳಿಸಿದ್ದಾನೆ: "ಆಗ ಅವನ ರಾಜ್ಯ ಪ್ರಭುತ್ವಗಳೂ ಸಮಸ್ತ ಭೂಮಂಡಲದಲ್ಲಿನ ರಾಜ್ಯಗಳ ಮಹಿಮೆಯೂ ಪರಾತ್ಪರನ ಭಕ್ತಜನರಿಗೆ ಕೊಡೋಣವಾಗುವವು, ಆತನ ರಾಜ್ಯವು ಶಾಶ್ವತ ರಾಜ್ಯ, ಸಕಲ ದೇಶಾಧಿಪತಿಗಳು ಆತನಿಗೆ ಅಧೀನರಾಗಿ ಸೇವೆ ಮಾಡುವರು" (ದಾನಿಯೇಲ 7: 27).

## 2. ಯೇಸುಕ್ರಿಸ್ತನ ಹೆಸರಿನ ವಿಷಯದ ಬಗ್ಗೆ

ದೇವರ ರಾಜ್ಯಕ್ಕೆ ಸಂಬಂಧಿಸಿದ ವಿಷಯ ಹಾಗೂ ಯೇಸುಕ್ರಿಸ್ತನ ಹೆಸರಿನ ವಿಷಯದ ಬಗ್ಗೆ ಸತ್ಯದ ಅಂಗೀಕಾರ ಹಾಗೂ ದೇವರ ವಾಕ್ಯದಲ್ಲಿರುವ ಆಜ್ಞೆಗಳಿಗೆ ವಿಧೇಯರಾಗುವುದು—ಇವೆರಡರ ಮೇಲೆ ರಕ್ಷಣೆಯು ಅವಲಂಬಿಸಿದೆ (ಅಪೋಸ್ತಲರ

---

* ಈ ಬಗ್ಗೆ ಹೆಚ್ಚಿನ ವಿಷಯ ತಿಳಿಯಲು ಬಯಸುವವರು "ಭೂಲೋಕದ ಮುಂದಣ ಮಹಿಮೆ" ಎಂಬ ಪುಸ್ತಕಕ್ಕೆ ಬರೆಯಿರಿ. ಉಚಿತವಾಗಿ ಕಳುಹಿಸಲಾಗುವುದು.

ಕೃತ್ಯ 8 : 12). ಯೇಸುಕ್ರಿಸ್ತನ ಹೆಸರಿನ ವಿಷಯವೆಂದರೆ ಆತನ ಬಗ್ಗೆ ದೃಢೀಕರಿಸುವ (ಸ್ಥಿರಪಡಿಸುವ) ಎಲ್ಲಾ ವಿಷಯಗಳು. ಆದ್ದರಿಂದ ಒಬ್ಬ ಪ್ರವಾದಿಯಾಗಿ, ಬಲಿಯಾಗಿ, ಯಾಜಕನಾಗಿ ಮತ್ತು ರಾಜನಾಗಿ ಆತನ ಗುಣಗಳ ಒಟ್ಟು ಸಾರಾಂಶವೇ ಆಗಿರುತ್ತದೆ. "ಆತನ ಹೆಸರನ್ನು" ಅರ್ಥ ಮಾಡಿಕೊಳ್ಳಬೇಕಾದಲ್ಲಿ, ಸತ್ಯವೇದದಲ್ಲಿ ಆತನ ಬಗ್ಗೆ ಏನು ಸಾಕ್ಷಿ ಹೇಳಿದೆ ಎಂಬುವುದನ್ನು ತಿಳಿಯಲೇಬೇಕು. ಹಳೇ ಒಡಂಬಡಿಕೆಯಲ್ಲಿ ಅದನ್ನು ಪ್ರವಾದನೆಯಾಗಿ ಬರೆಸಲ್ಪಟ್ಟಿದೆ, ಹೊಸ ಒಡಂಬಡಿಕೆಯಲ್ಲಿ ಚಾರಿತ್ರಿಕವಾಗಿ ತಿಳಿಸಲ್ಪಟ್ಟಿದೆ. ದುರಾದೃಷ್ಟವಶಾತ್ ಆತನ ವ್ಯಕ್ತಿ ಹಾಗೂ ಉದ್ದೇಶಗಳ ವಾಸ್ತವ ಸಂಗತಿಗಳನ್ನು ವಿಕೃತಗೊಳಿಸಿರುವ ತತ್ವಗಳು ಕರ್ತನಾದ ಯೇಸುಕ್ರಿಸ್ತನ ವ್ಯಕ್ತಿ, ಬಲಿಯ ಉದ್ದಿಷ್ಯ ಹಾಗೂ ಭವಿಷ್ಯತ್ತಿನ ಮಹಿಮೆಯ ಬಗ್ಗೆ ಸತ್ಯವನ್ನು ಆತನ ವ್ಯಕ್ತಿ ಹಾಗೂ ಉದ್ದೇಶಗಳ ವಾಸ್ತವ ಸಂಗತಿಗಳನ್ನು ವಿಕೃತಗೊಳಿಸಿರುವ ತತ್ವಗಳು ಮರೆಮಾಚಿವೆ. ಆತನ "ಹೆಸರಿನ ವಿಷಯ"ದಲ್ಲಿ ಬಹು ಮುಖ್ಯವಾಗಿ ಆತನಿಗೂ ಪರಲೋಕದಲ್ಲಿರುವ ಆತನ ತಂದೆಗೂ ಇರುವ ಸಂಬಂಧ ಹಾಗೂ ಭೂಲೋಕದ ಮೇಲಿರುವ ಮಾನವ ವರ್ಗಕ್ಕೂ ಇರುವ ಸಂಬಂಧ, ಅಂದರೆ ದೇವರ, ಮಾನವನ ಪ್ರಕೃತಿಯ, ಸುವಾರ್ತೆಯ ನಿರೀಕ್ಷೆ, ಅದಕ್ಕೆ ಮಾನವನ ಸಂಬಂಧ ಮತ್ತು ಅವನ ಮುಂದಿನ ಗಮ್ಯಸ್ಥಾನದ ಬಗ್ಗೆ ಪ್ರಾಮುಖ್ಯ ಸತ್ಯವು ಸೇರಿಕೊಂಡಿದೆ.

"ದೇವರ ರಾಜ್ಯದ ವಿಷಯ ಮತ್ತು ಯೇಸುಕ್ರಿಸ್ತನ ಹೆಸರಿನ ವಿಷಯದ" ಬಗ್ಗೆ ಪೂರ್ಣವಾಗಿ ತಿಳಿಯದೇ ಹೊಂದುವ ದೀಕ್ಷಾಸ್ನಾನವು ವ್ಯರ್ಥವಾದುದು. ಈ ಎರಡು ವಿಷಯಗಳ ಬಗ್ಗೆ ಸಂಪೂರ್ಣ ತಿಳುವಳಿಕೆಯನ್ನು ಹೊಂದಿದನಂತರವೇ ದೀಕ್ಷಾಸ್ನಾನವೆಂಬ ಬಹಿರಂಗ ಸಾಕ್ಷ್ಯದ ಮೂಲಕ ದೇವರ ರಾಜ್ಯದ ಮಾರ್ಗವನ್ನು ಪ್ರವೇಶಿಸಬಹುದಾಗಿದೆ. ಈ ಎರಡೂ ವಿಷಯಗಳೇನೆಂಬುದನ್ನು ಸಂಕ್ಷಿಪ್ತವಾಗಿ ಒಂದೊಂದಾಗಿ ನೋಡೋಣ.

## 1. ದೇವರ ರಾಜ್ಯದ ವಿಷಯಗಳು

**ಮೂಲವಾಗಿ ಈ ಕೆಳಕಂಡ ವಿಷಯಗಳನ್ನೊಳಗೊಂಡಿದೆ :**

1. ಯೇಸುವು ಸಾರಿದ ರಾಜ್ಯದ ಸುವಾರ್ತೆ.
2. ಅಪೋಸ್ತಲರು ಸಾರಿದ ಅದೇ ಸುವಾರ್ತೆ.
3. ಈ ರಾಜ್ಯವು ಯಾವುದು ?
4. ದೇವರ ರಾಜ್ಯವು ಒಂದು ಕಾಲದಲ್ಲಿ ಅಸ್ತಿತ್ವದಲ್ಲಿತ್ತು ಮತ್ತು ಅದು ಪುನಃ ಸ್ಥಾಪಿಸಲ್ಪಡುವುದು.

5. ಪುನರ್‌ಸ್ಥಾಪಿಸಲ್ಪಟ್ಟ ಇಸ್ರಾಯೇಲ್ ರಾಜ್ಯವೇ ದೇವರ ರಾಜ್ಯವಾಗುವದು.

6. ಯೆಹೂದ್ಯರು ಆ ರಾಜ್ಯದ ಪ್ರಜೆಗಳಾಗುವರು.

7. ಯೆರೂಸಲೇಮು ಪ್ರಪಂಚದ ಮುಂದಿನ ರಾಜಧಾನಿಯಾಗುವದು.

8. ದಾವೀದನೊಂದಿಗೆ ಮಾಡಿಕೊಂಡ ಒಡಂಬಡಿಕೆಯಲ್ಲಿ ಯೆರೂಸಲೇಮಿನ ರಾಜನನ್ನು ನೇಮಕ ಮಾಡಲಾಗುವುದು.

9. ಪುನರ್ ಸ್ಥಾಪಿಸಲ್ಪಟ್ಟ ದಾವೀದನ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಯೇಸುಕ್ರಿಸ್ತನಿಗೆ ವಾಗ್ದಾನ ಮಾಡಲ್ಪಟ್ಟಿದೆ.

10. ಭಕ್ತರು ಆ ರಾಜ್ಯಕ್ಕೆ ಬಾಧ್ಯಸ್ಥರಾಗುವರು.

11. ಅಬ್ರಹಾಮನೊಂದಿಗೆ ಮಾಡಿದ ಒಡಂಬಡಿಕೆ.

12. ಅದೇ ಒಡಂಬಡಿಕೆಯು ಇಸಾಕ ಮತ್ತು ಯಾಕೋಬರೊಂದಿಗೆ ದೃಢೀಕರಿಸಲ್ಪಟ್ಟಿತು.

13. ಆ ವಾಗ್ದಾನಗಳು ಇನ್ನೂ ಕೂಡ ನೆರವೇರಿಲ್ಲ.

14. ದೇವರ ರಾಜ್ಯವು ಸ್ಥಾಪಿಸಲ್ಪಡುವಾಗ ಆ ವಾಗ್ದಾನಗಳು ನೆರವೇರುತ್ತವೆ.

15. ಕ್ರಿಸ್ತನ ಹಿಂದಿರುಗುವಿಕೆಯು ಅನಿವಾರ್ಯವಾದುದು.

16. ನಿರೀಕ್ಷೆಯ ಏಕೈಕ ಉದ್ದೇಶವು ದೇವರ ರಾಜ್ಯದ ಸ್ಥಾಪನೆಯೇ ಆಗಿದೆ.

17. ರಾಜ್ಯದ ಅವಧಿ.

## 2. ಕರ್ತನಾದ ಯೇಸುಕ್ರಿಸ್ತನ ಹೆಸರಿನ ವಿಷಯ

18. ಒಬ್ಬನೇ ದೇವರಿದ್ದಾನೆ.

19. ದೇವರ ಶಕ್ತಿಯು (Spirit) ಒಂದು ವ್ಯೆಯಕ್ತಿಕ ದೇವರಲ್ಲ.

19A. ಪವಿತ್ರಾತ್ಮ.

20. ಯೇಸುಕ್ರಿಸ್ತನು ದೇವರ ಮಗನು.

21. ಯೇಸುಕ್ರಿಸ್ತನು ಎರಡನೇ ಆದಾಮನು.

22. ಆತನ ಮರಣದ ಉದ್ದೇಶ.

22A. ಆತನ ಪುನರುತ್ಥಾನ

23. ಸತ್ಯವೇದದಲ್ಲಿನ ಪಿಶಾಚ (Devil).

23A. ದೆವ್ವಗಳು, ಪಿಶಾಚಿಗಳು ಮತ್ತು ದುರಾತ್ಮಗಳು.

24. ಮಾನವನ ಪ್ರಕೃತಿ—ಜನಸಾಮಾನ್ಯ ಅಭಿಪ್ರಾಯ.

ಸತ್ಯವೇದದ್ವೈತತ್ವ :

A. ಮಾನವನು ಧೂಳಿನಿಂದಾದ ಪ್ರಾಣಿಯಾಗಿದ್ದಾನೆ.

B. ಮಾನವನು ಮರ್ತ್ಯನು.

C. ಸತ್ತವರು ಪ್ರಜ್ಞಾಶೂನ್ಯರಾಗಿರುತ್ತಾರೆ.

D. "ಆತ್ಮವು" (Soul) ಅಮರವಾದುದಲ್ಲ.

E. ಮಾನವನಲ್ಲಿರುವ ಆತ್ಮವು (Spirit) ಸಾಯದೇ ಇರುವಂಥದಲ್ಲ.

25. "ಆತ್ಮವು (Soul)" ಅಮರವಾದುದೆಂಬ ತತ್ವದ ಮೂಲ.

26. ಅಮರತ್ವದ ನಿಜವಾದ ತತ್ವ—

1. ನೀತಿವಂತರಿಗೆ ಮಾತ್ರ ನೀಡಲಾಗುವುದು.

2. ದೇಹದ ಮೂಲಕವಾಗಿ ಸಿದ್ಧಿಸುವಂತಾದ್ದು.

3. ಭೂಲೋಕದ ಮೇಲೆ ಅನುಭವಿಸುವಂತಾದ್ದು.

27. ಭೂಲೋಕವು ಭಕ್ತರ ಸ್ವಾಸ್ತ್ಯವಾಗಿರುತ್ತದೆ.

28. ಸತ್ಯವೇದದ ನರಕ (Hell).

28A. ಗೆಹೆನ್ನಾ.

29. ದುಷ್ಟರ ಗಮ್ಯಸ್ಥಾನ (ಅಂತ್ಯ).

30. ಮಾನವ ವರ್ಗದ ಬೇಜವಾಬ್ದಾರಿತನ.

31. ಕ್ರಿಸ್ತನ ನ್ಯಾಯತೀರ್ಪಿನ ಸ್ಥಳ.

32. ದೀಕ್ಷಾಸ್ನಾನ : ಅದರ ಲಕ್ಷಣ ಹಾಗೂ ಉದ್ದೇಶ.